ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 386 (242)
2) ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 17.07.2019
4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ಬೀದರ್ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕುವಾರು / ಮತಕ್ಷೇತ್ರವಾರು ಅರಣ್ಯ ಇಲಾಖೆಯಿಂದ ಟ್ರೀಪಾರ್ಕ್ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
(ಆ)	ಪ್ರತಿ ಟ್ರೀಪಾರ್ಕ್ ನಿರ್ಮಾಣಕ್ಕಾಗಿ ಸರ್ಕಾರ ನೀಡುತ್ತಿರುವ ಅನುದಾನವೆಷ್ಟು;	ಪ್ರತಿ ಟ್ರೀಪಾರ್ಕ್‌ನ ವಿಸ್ತೀರ್ಣ ಮತ್ತು ಅಲ್ಲಿ ಕೈಗೊಳ್ಳುವ ಕಾಮಗಾರಿಗಳ ಆಧಾರದ ಮೇಲೆ ಟ್ರೀಪಾರ್ಕ್‌ಗಳ ನಿರ್ಮಾಣಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಮುಂದುವರಿದು, ಬೀದರ್ ಜಿಲ್ಲೆಯಲ್ಲಿ ಟ್ರೀಪಾರ್ಕ್ ನಿರ್ಮಾಣ ಮತ್ತು ಅಭಿವೃದ್ಧಿಪಡಿಸಿರುವ ಟ್ರೀಪಾರ್ಕ್‌ಗಳು ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ ಲಕ್ಷಗಳಲ್ಲಿ)

ಕ್ರ ಸಂ.	ಮತಕ್ಷೇತ್ರ	ಟ್ರೀಪಾರ್ಕ್ ಹೆಸರು	ಮೊತ್ತ
1	ಬೀದರ್ (ಉತ್ತರ)	ನೌಬಾದ್	169.000
2	ಬೀದರ್ (ದಕ್ಷಿಣ)	ಹಳ್ಳದಕೇರಿ	148.500
3	ಬಸವಕಲ್ಯಾಣ	ತ್ರಿಪುರಾಂತ	106.500
4	ಹುಮನಾಬಾದದ	ಕಲ್ಲೂರುರಸ್ತೆ	109.000

ಕ್ರ ಸಂ	ಪ್ರಶ್ನೆ	ಉತ್ತರ
(ಇ)	2018-19ನೇ ಸಾಲಿನಲ್ಲಿ ಒಟ್ಟು ಎಷ್ಟು ಟ್ರೀಪಾರ್ಕ್‌ಗಳನ್ನು ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡಲಾಗಿದೆ; (ಮಾಹಿತಿ ಒದಗಿಸುವುದು)	2018-19ನೇ ಸಾಲಿನಲ್ಲಿ 3 ಟ್ರೀಪಾರ್ಕ್‌ಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ಒಟ್ಟು ರೂ.110.00 ಲಕ್ಷಗಳ ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.

(ರೂ ಲಕ್ಷಗಳಲ್ಲಿ)

ಕ್ರ ಸಂ.	ಮತಕ್ಷೇತ್ರ	ಟ್ರೀ ಪಾರ್ಕ್ ಹೆಸರು	ಮೊತ್ತ
1	ಬೀದರ್ (ದಕ್ಷಿಣ)	ಹಳ್ಳದಕೇರಿ	52.50

		2 ಬಸವಕಲ್ಯಾಣ ತ್ರಿಪುರಾಂತ 45.50 3 ಹುಮನಾಬಾದ ಕಲ್ಲೂರುರಸ್ತೆ 12.00 ಒಟ್ಟು 110.00
(ಈ)	ಬೀದರ್ ಜಿಲ್ಲೆಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಟ್ರೀಪಾರ್ಕ್ ನಿರ್ಮಾಣವನ್ನು ಯಾವಾಗ ಮಾಡಲಾಗುವುದು;	ಬೀದರ್ ಜಿಲ್ಲೆಯಲ್ಲಿ ಈ ಕೆಳಗಿನಂತೆ ವಿಧಾನಸಭಾ ಕ್ಷೇತ್ರವಾರು ಟ್ರೀಪಾರ್ಕ್‌ಗಳನ್ನು ನಿರ್ಮಾಣ ಮಾಡಲಾಗಿದೆ. 1) ಬೀದರ್ (ಉತ್ತರ) – ನೌಬಾದ ಟ್ರೀ-ಪಾರ್ಕ್ 2) ಬೀದರ್ (ದಕ್ಷಿಣ) – ಹಳ್ಳದಕೇರಿ ಟ್ರೀ-ಪಾರ್ಕ್ 3) ಬಸವಕಲ್ಯಾಣ – ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನ, ತ್ರಿಪುರಾಂತ, ಬಸವಕಲ್ಯಾಣ 4) ಹುಮನಾಬಾದ್ – ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನ, ಕಲ್ಲೂರ ರಸ್ತೆ, ಹುಮನಾಬಾದ್. ಭಾಲ್ಕಿ ಮತ್ತು ಔರಾದ ವಿಧಾನಸಭಾ ಕ್ಷೇತ್ರಗಳಲ್ಲಿ ನಿರ್ಮಾಣ ಕಾಮಗಾರಿ ಕೈಗೊಂಡಿರುವುದಿಲ್ಲ.
(ಉ)	ಟ್ರೀಪಾರ್ಕ್ ನಿರ್ಮಾಣ ಮಾಡಲು ಇಲಾಖೆಯಿಂದ ಪ್ರಸ್ತಾವನೆ ಬಂದಿದೆಯೇ; ಬಂದಿದ್ದಲ್ಲಿ, ಮಂಜೂರಾತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಮೇಲಿನ 4 ಟ್ರೀಪಾರ್ಕ್‌ಗಳ ನಿರ್ಮಾಣಕ್ಕಾಗಿ ಪ್ರಸ್ತಾವನೆಗಳು ಬಂದಿದ್ದು, ಅದರಂತೆ ಮಂಜೂರಾತಿ ನೀಡಿ, ಸದರಿ ಟ್ರೀ ಪಾರ್ಕ್‌ಗಳ ನಿರ್ಮಾಣ ಮಾಡಿ, ಅಭಿವೃದ್ಧಿಗೊಳಿಸಲಾಗುತ್ತಿದೆ.

ಸಂಖ್ಯೆ: ಅಪಜೀ 21 ಎಫ್‌ಟಿಎಸ್ 2019

(ಸತೀಶ್ ಎಲ್. ಜಾರಕಿಹೊಳಿ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು